2019 ಕ.ತೀ.ವ 1237

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

## ಕೇವಲ್ ಚಂದ್ –ವಿರುದ್ಧ– ವ್ಯವಸ್ಥಾಪಕರು, ಕೇರಳ ರೋಡವೇಸ್ ಅಮಿಟೆಡ್ ಮತ್ತು ಇನ್ನೊಬ್ಬರು*

ಸಿವಿಲ್ ಪ್ರಕ್ರಿಯಾ ಸಂಹಿತೆಯ 41ನೇ ಕ್ರಮಾದೇಶದ 22ನೇ ನಿಯಮದ ಮೇರೆಗೆ ಸಲ್ಲಿಸಲಾದ ಮೊದಲ ಪುನರೀಕ್ಷಣಾ ಅರ್ಜಿ.

ವಿಚಾರಣಾಧೀನ ನ್ಯಾಯಾಲಯವು ಅಭಿಲೇಖಿಸಿದ ಸಂಖ್ಯೆ:1 ಮತ್ತು 2ರ ಮೇಲಿನ ವಿವಾದಾಂಶಗಳನ್ನು ಮೇಲಿನ ನಿರ್ಣಯಗಳನ್ನು ವಜಾಗೊಳಿಸುವುದಕ್ಕೆ ವಿಚಾರಣಾಧೀನ ನ್ಯಾಯಾಲಯದ ಮುಂದೆ ಪ್ರತ್ಯರ್ಜಿದಾರರು ಆರ್‌ಎಫ್‌ಎ ಸಿಆರ್‌ಓಬಿ ಸಂಖ್ಯೆ:18/ 2004 ಅನ್ನು ದಾಖಲಿಸಿರುವರು.

ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳು ಹೀಗಿದೆ. ವಾದಿಯು ಸಗಟು ಜವಳಿ ಮಾರಾಟಗಾರನಾಗಿರುವನು. ವಾದಿಯು, ಮೊದಲ ಪ್ರತಿವಾದಿಗೆ ಬೆಂಗಳೂರಿನಿಂದ ಕೇರಳದಲ್ಲಿರುವ ಕೊಯಿಲಾಂಡಿಗೆ ಕೆಲವೊಂದು ಸರಕುಗಳನ್ನು ಸಾಗಣೆ ಮಾಡುವುದಕ್ಕಾಗಿ ಜವಾಬ್ದಾರಿ ವಹಿಸಿದ್ದನು. ಸರಕುಗಳನ್ನು ಸಾಲದ ಮೇಲೆ ಮಾರಾಟ ಮಾಡಲಾಗಿದೆ ಮತ್ತು ಬ್ಯಾಂಕಿನ ಮುಖಾಂತರ ದಸ್ತಾವೇಜುಗಳನ್ನು ಕಳುಹಿಸಲಾಗಿದೆ. ಯಾವ ಖರೀದಿದಾರನನ್ನು ಸರಕುಗಳ ಮೌಲ್ಯವನ್ನು ಪಾವತಿಸುವುದಕ್ಕೆ ಮತ್ತು ದಸ್ತಾವೇಜುಗಳನ್ನು ಪಡೆದುಕೊಳ್ಳುವುದಕ್ಕೆ ಅಗತ್ಯಪಡಿಸಲಾಗಿತ್ತೊ, ಅವನು ಹಾಗೆ ಮಾಡುವುದಕ್ಕೆ ವಿಫಲನಾಗಿರುವನು. ಈ ಸನ್ನಿವೇಶಗಳಲ್ಲಿ, ವಾದಿಯು ಮೊದಲ ಪ್ರತಿವಾದಿಯಿಂದ ಸರಕುಗಳನ್ನು ಕೊಯಿಲಾಂಡಿನಿಂದ ಬೆಂಗಳೂರಿಗೆ ಹಿಂದುರಿಗಿಸಲು ಕೋರಿರುತ್ತಾನೆ. ಪ್ರತಿವಾದಿ ಸಾರಿಗೆ ಕಂಪನಿಯು ವಾದಿಯ ಕೋರಿಕೆಯನ್ನು

*ನಿಯತ ಮೊದಲ ಅಪೀಲು ಸಂಖ್ಯೆ: 1432/2003 (ಎಮ್‌ಓಎನ್) ಇದರೊಂದಿಗೆ ಇತರೆ, ದಿನಾಂಕ 13ನೇ ಆಗಸ್ಟ್, 2018.

ನೆರವೇರಿಸಿರುವುದಿಲ್ಲ. ಇದರಿಂದ ವಾದಿಯು ಸರಕುಗಳ ಮೌಲ್ಯ ಮತ್ತು ಅದರ ಮೇಲಿನ ಬಡ್ಡಿಯನ್ನು ವಸೂಲಿ ಮಾಡುವುದಕ್ಕಾಗಿ ಕೂಡಲೆ ದಾವೆಯನ್ನು ಹೂಡಿರುವನು.

*ಶ್ರೀ ಬಾಲಕೃಷ್ಣ ಶಾಸ್ತ್ರಿಯವರು, ಅಮೆರಿಕನ್ ಎಕ್ಸ್‌ಪೋರ್ಟ್ ಇಬ್ರಾಂಡ್‌ಸೆನ್ ಲೈನ್ಸ್ ಇಂಕ್ ಮತ್ತು ಮತ್ತೊಬ್ಬರು –ವಿರುದ್ಧ– ಜೋ ಲೊಪೆಜ್ ಮತ್ತು ಮತ್ತೊಬ್ಬರು ಎಐಆರ್ 1972 ಎಸ್‌ಸಿ 1405*ರಲ್ಲಿ ವರದಿಯಾಗಿರುವ ಮೊಕದ್ದಮೆಯಲ್ಲಿ ಸರಕುಗಳನ್ನು ವಿಲೇ ಮಾಡದಿರುವ ವಾದಾಂಶಾದಲ್ಲಿ ಅದನ್ನು ಸಂಬಂಧಪಟ್ಟ ಸರಕು ರವಾನೆದಾರ ಸಾಧ್ಯವಾದಷ್ಟುಮಟ್ಟಿಗೆ "ಹಾನಿ ಅಥವಾ ನಷ್ಟ" ಎಂದು ಪರಿಭಾಷಿಸಿರುತ್ತಾನೆ. ವಿಲೆಯಾಗದಿರುವುದು ಎಂದರೆ ನಷ್ಟವಾಗಿದೆ ಎಂದು ಅರ್ಥ ಎಂಬ ವಾದಾಂಶವನ್ನು ಆಧಾರವಾಗಿ ಮೇಲೆ ಪ್ರಸ್ತಾವಿತ ಕಾನೂನಿಗೆ ಆಧಾರವಾಗಿ ಮಂಡಿಸಿರುವರು. ಶ್ರೀ ಸುರಾನ ಅವರು ಶ್ರೀ ಬಾಲಕೃಷ್ಣ ಶಾಸ್ತ್ರಿ ಅವರು ನಿರ್ದಿಷ್ಟವಾಗಿ ನೀಡಿದ ಮೊಕದ್ದಮೆಗೆ ವಿರುದ್ಧವಾಗಿ ಮಂಡಿಸಿದ ಭಾರತೀಯ ಸಮುದ್ರ ಮೂಲಕ ಸರಕುಗಳ ವಾಹಕ ಅಧಿನಿಯಮ, 1925ರ ಅಡಿಯಲ್ಲಿ ಭಾರತ ಸಾರಿಗೆ ನಿಗಮ ನಿಯಮಿತ –ವಿರುದ್ಧ– ವೆಲ್‌ಜಾನ್ ಹೈಡ್ರೇರ್ ನಿಯಮಿತ (2007) 3 ಎಸ್‌ಸಿಸಿ 142 ಮೊಕದ್ದಮೆಯ ತೀರ್ಪಿನಲ್ಲಿ, ವಾಹಕಗಳ ಅಧಿನಿಯಮ, 1865ರ 10ನೇ ಪ್ರಕರಣದೊಂದಿಗೆ ವ್ಯವಹರಿಸುವ ಅಂಶವು ನೇರವಾದುದಾಗಿದೆ ಎಂದು ಒತ್ತಾಯಿಸಿ ವಾದವನ್ನು ನಿವೇದಿಸಿರುವರು.

ವಿವಾದವಾಗದಿರುವ ಸಂಗತಿಯ ಹಿನ್ನೆಲೆಯಲ್ಲಿ, ವಾದಿಯು ಸರಕುಗಳನ್ನು ಹಿಂದಿರುಗಿಸುವುದಕ್ಕೆ ಕೋರಿರುತ್ತಾನೆ ಮತ್ತು ಪ್ರತಿವಾದಿಗಳು ಸದರಿ ಕೋರಿಕೆಯನ್ನು ನೆರವೇರಿಸುವಲ್ಲಿ ವಿಫಲವಾಗಿರುವರು. ನನ್ನ ಪರಿಗಣನೆಯ ಅಭಿವ್ಯಕ್ತಿಯಲ್ಲಿ, ವಿಚಾರಣಾಧೀನ ನ್ಯಾಯಾಲಯ ವಾಹಕಗಳ ಅಧಿನಿಯಮ, 1865ರ 10ನೇ ಪ್ರಕರಣದ ಅಡಿಯಲ್ಲಿ ನೋಟಿಸ್ ಅನ್ನು ನೀಡುವುದಕ್ಕಾಗಿ ದಾವೆಯನ್ನು ವಜಾ ಮಾಡಿರುವುದು ದೋಷಪೂರ್ಣವಾಗಿದೆ.

ತತ್ ಪರಿಣಾಮವಾಗಿ, ಆರ್‌ಎಫ್‌ಎ ಸಂಖ್ಯೆ: 1432/2003ರ ಅಪೀಲಿನಲ್ಲಿ ಗುಣಾರ್ಹತೆಯನ್ನು ಪರಿಗಣಿಸಲಾಗಿದೆ ಮತ್ತು ಆರ್‌ಎಫ್‌ಎ ಸಿಆರ್‌ಒಬಿ ಸಂಖ್ಯೆ:18/ 2004 ರಲ್ಲಿ ಗುಣಾರ್ಹತೆಗಳು ಶೂನ್ಯವಾಗಿರುವುದರಿಂದ ವಜಾಗೊಳ್ಳಲು ಅರ್ಹವಾಗಿದೆ. ಅದು ಈ ಮುಂದಿನಂತಿದೆ.

**ಆದೇಶಗಳು**

**(i) ಆರ್‌ಎಫ್‌ಎ ಸಂಖ್ಯೆ: 1432/2003ಅನ್ನು ಭಾಗಶಃ ಪುರಸ್ಕರಿಸಲಾಗಿದೆ ಮತ್ತು XXVI ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶ, ಮೇಯೋಹಾಲ್, ಬೆಂಗಳೂರಿನಲ್ಲಿ ದಾಖಲಿಸಿದ ಅ.ದಾ.ಸಂ: 16514/2000ರಲ್ಲಿ ದಿನಾಂಕ 27.3.2003ರಂದು ನೀಡಿದ ತೀರ್ಪು ಮತ್ತು ಡಿಕ್ರಿಯನ್ನು ವಜಾಗೊಳಸಲಾಗಿದೆ;**

**(ii) ಅ.ದಾ.ಸಂಖ್ಯೆ: 16514/2000ರಲ್ಲಿ ದಾವೆಯು ಡಿಕ್ರಿಯಾಗಿದೆ. ಪ್ರತ್ಯರ್ಜಿದಾರರಿಗೆ ದಾವೆಯ ದಿನಾಂಕದಿಂದ, ವಾದಿಗೆ ಮೊತ್ತವನ್ನು ಸಂದಾಯ ಮಾಡುವವರೆಗೂ ವಾರ್ಷಿಕ ಶೇ.12ರಷ್ಟು ಸರಳ ಬಡ್ಡಿ ದರದಲ್ಲಿ 24,740/– ರೂ.ಗಳನ್ನು ಸಂದಾಯ ಮಾಡುವುದಕ್ಕೆ ಪ್ರತ್ಯರ್ಜಿದಾರರಿಗೆ ನಿರ್ದೇಶಿಸಲಾಗಿದೆ.**

**(iii) ಆರ್‌ಎಫ್‌ಎ ಸಿಆರ್‌ಒಬಿ ಸಂಖ್ಯೆ: 18/2004 ಅನ್ನು ವಜಾಗೊಳಸಲಾಗಿದೆ. ಯಾವುದೇ ವೆಚ್ಚಗಳು ಇಲ್ಲ.**

***ಉಲ್ಲೇಖಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. (2007) 3 ಎಸ್‌ಸಿಸಿ 142*
*ಭಾರತ ಸಾರಿಗೆ ನಿಗಮ ನಿಯಮಿತ –ವಿರುದ್ಧ–*
*ವೆಲ್‌ಜಾನ್ ಹೈಡ್ರೇರ್ ನಿಯಮಿತ* *(ಉಲ್ಲೇ) 8*

*2. ಎಐಆರ್ 1972 ಎಸ್‌ಸಿ 1405*
*ಅಮೆರಿಕನ್ ಎಕ್ಸ್‌ಪೋರ್ಟ್ ಇಬ್ರಾಂಡ್‌ಸೆನ್ ಲೈನ್ಸ್ ಇಂಕ್*
*ಮತ್ತು ಮತ್ತೊಬ್ಬರು –ವಿರುದ್ಧ–*
*ಜೋ ಲೊಪೆಜ್ ಮತ್ತು ಮತ್ತೊಬ್ಬರು* *(ಉಲ್ಲೇ) 14*

ಅರ್ಜಿದಾರರ ಪರ: ಶ್ರೀ ಪಿ.ಡಿ. ಸುರಾನಾ, ವಕೀಲರು.

ಪ್ರತ್ಯರ್ಜಿದಾರರ ಪರ: ಶ್ರೀ ಬಾಲಕೃಷ್ಣ ಶಾಸ್ತ್ರಿ, ವಕೀಲರು

## ತೀರ್ಪು

**ನ್ಯಾಯಮೂರ್ತಿ ಶ್ರೀ ದಿನೇಶ್ ಕುಮಾರ್** :

ವಾದಿಯು, ಬೆಂಗಳೂರಿನ ಮೆಯೋ ಹಾಲ್‌ನ XXVIನೇ ಹೆಚ್ಚುವರಿ ಸಿಟಿ ಸಿವಿಲ್ ನ್ಯಾಯಾಧೀಶರ ಮುಂದೆ ಮೂ.ದಾ.ಸಂ. 16514/200ನ್ನು ದಾಖಲಿಸಿದ್ದು, ಸದರಿ ದಾವೆಯನ್ನು ವಜಾಗೊಳಿಸಿದ ವಿಚಾರಣಾ ನ್ಯಾಯಾಲಯದ ದಿನಾಂಕ 27–3–2003ರ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಆರ್‌ಎಫ್‌ಎ ಸಂ. 1432/2003ನ್ನು ಸಲ್ಲಿಸಿದ್ದಾನೆ.

ವಿಚಾರಣಾಧೀನ ನ್ಯಾಯಾಲಯವು ಅಭಿಲೇಖಿಸಿದ ಸಂಖ್ಯೆ:1 ಮತ್ತು 2ರ ಮೇಲಿನ ವಿವಾದಾಂಶಗಳ ಮೇಲಿನ ನಿರ್ಣಯಗಳನ್ನು ವಜಾಗೊಳಿಸುವುದಕ್ಕೆ ವಿಚಾರಣಾಧೀನ ನ್ಯಾಯಾಲಯದ ಮುಂದೆ ಪ್ರತ್ಯರ್ಜಿದಾರರು ಆರ್‌ಎಫ್‌ಎ ಸಿಆರ್‌ಒಬಿ ಸಂಖ್ಯೆ:18/2004 ಅನ್ನು ದಾಖಲಿಸಿರುವರು.

2. ಅನುಕೂಲತೆಯ ಸೌಲಭ್ಯಕ್ಕಾಗಿ ಪಕ್ಷಕಾರರನ್ನು ವಿಚಾರಣಾ ನ್ಯಾಯಾಲಯದ ಮುಂದೆ ಅವರು ಹೊಂದಿರುವ ಸ್ಥಾನಮಾನದಂತೆಯೇ ಉಲ್ಲೇಖಿಸಲಾಗಿದೆ.

3. ವಾದಿಯ ಪರವಾಗಿ ಮಾನ್ಯ ನ್ಯಾಯವಾದಿಗಳಾದ ಪಿ.ಡಿ. ಸುರಾನ ಅವರ ವಾದವನ್ನು ಮತ್ತು ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳಾದ ಶ್ರೀ ಜಿ. ಬಾಲಕೃಷ್ಣ ಶಾಸ್ತ್ರಿ ಅವರ ವಾದಗಳನ್ನು ಆಲಿಸಲಾಗಿದೆ.

4. ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳು ಹೀಗಿದೆ. ವಾದಿಯು ಸಗಟು ಜವಳಿ ಮಾರಾಟಗಾರನಾಗಿರುವನು. ವಾದಿಯು, ಮೊದಲ ಪ್ರತಿವಾದಿಗೆ ಬೆಂಗಳೂರಿನಿಂದ ಕೇರಳದಲ್ಲಿರುವ ಕೊಯಿಲಾಂಡಿಗೆ ಕೆಲವೊಂದು ಸರಕುಗಳನ್ನು ಸಾಗಣೆ ಮಾಡುವುದಕ್ಕಾಗಿ ಜವಾಬ್ದಾರಿ ವಹಿಸಿದ್ದನು. ಸರಕುಗಳನ್ನು ಸಾಲದ ಮೇಲೆ ಮಾರಾಟ ಮಾಡಲಾಗಿದೆ ಮತ್ತು ಬ್ಯಾಂಕಿನ ಮುಖಾಂತರ ದಸ್ತಾವೇಜುಗಳನ್ನು ಕಳುಹಿಸಲಾಗಿದೆ. ಯಾವ ಖರೀದಿದಾರನನ್ನು ಸರಕುಗಳ ಮೌಲ್ಯವನ್ನು ಪಾವತಿಸುವುದಕ್ಕೆ ಮತ್ತು ದಸ್ತಾವೇಜುಗಳನ್ನು ಪಡೆದುಕೊಳ್ಳುವುದಕ್ಕೆ ಅಗತ್ಯಪಡಿಸಲಾಗಿತ್ತೊ, ಅವನು ಹಾಗೆ ಮಾಡುವುದಕ್ಕೆ ವಿಫಲನಾಗಿರುವನು. ಈ ಸನ್ನಿವೇಶಗಳಲ್ಲಿ, ವಾದಿಯು ಮೊದಲ ಪ್ರತಿವಾದಿಯಿಂದ ಸರಕುಗಳನ್ನು ಕೊಯಿಲಾಂಡಿನಿಂದ ಬೆಂಗಳೂರಿಗೆ ಹಿಂದುರಿಗಿಸಲು ಕೋರಿರುತ್ತಾನೆ. ಪ್ರತಿವಾದಿ ಸಾರಿಗೆ ಕಂಪನಿಯು ವಾದಿಯ ಕೋರಿಕೆಯನ್ನು ನೆರವೇರಿಸಿರುವುದಿಲ್ಲ. ಇದರಿಂದ ವಾದಿಯು ಸರಕುಗಳ ಮೌಲ್ಯ ಮತ್ತು ಅದರ ಮೇಲಿನ ಬಡ್ಡಿಯನ್ನು ವಸೂಲಿ ಮಾಡುವುದಕ್ಕಾಗಿ ಕೂಡಲೆ ದಾವೆಯನ್ನು ಹೂಡಿರುವನು.

5. ದಾವೆಗೆ ಪ್ರತಿರೋಧವಾಗಿ ಪ್ರತಿವಾದಿಯು ವಾದಾಂಶಕ್ಕೆ ಸಂಬಂಧಪಟ್ಟಂತೆ ಲಿಖಿತ ವಿವರಣಾ ಪತ್ರವನ್ನು ದಾಖಲಿಸಿರುವರು. ದಾವೆಯನ್ನು ಶಾಖೆಯ ವ್ಯವಸ್ಥಾಪಕ, ಮೆ|| ಕೇರಳ ರೋಡ್ ವೇಸ್ ಲಿಮಿಟೆಡ್ ವಿರುದ್ಧ ದಾಖಲಿಸಲಾಗಿದೆ ಮತ್ತು ಶಾಖೆಯ ವ್ಯವಸ್ಥಾಪಕನು ಯಾವುವೇ ಕ್ರಮ ತೆಗೆದುಕೊಳ್ಳಲು ವೈಯಕ್ತಿಕ ಹೊಣೆಗಾರನಾಗಿರುವುದಿಲ್ಲ ಮತ್ತು ಸರಕಿನ ಮೌಲ್ಯ ಮತ್ತು ಬಡ್ಡಿಯನ್ನು ಪಾವತಿಸುವುದಕ್ಕೆ ನಿರಾಕರಿಸಿ ವಾದವನ್ನು ಮಂಡಿಸಿರುವರು. ಮುಂದುವರೆದು, ವಾದಿಯು ವಾಹಕ ಅಧಿನಿಯಮ, 1865ರ 10ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಿದ ನೋಟೀಸನ್ನು ಹೊರಡಿಸಿರುವುದಿಲ್ಲ ಎಂದು ಪ್ರತಿವಾದಿಯು ಲಿಖಿತದಲ್ಲಿ ವಾದವನ್ನು ನಿವೇದಿಸಿರುವರು. ವಾದಗಳ ಆಧಾರದ ಮೇಲೆ ವಿಚಾರಣಾಧೀನ ನ್ಯಾಯಾಲಯ ರೂಪಿಸಿದ ವಿವಾದಾಂಶಗಳು ಈ ಕೆಳಗಿನಂತಿದೆ:

> "1. ವಾದಿಯು ಶ್ರೀ ಗಿರೀಶನ್ ಪರಂಬಿರ್ ಹೌಸ್, ಮೆ|| ಎಸ್.ಎಂ. ಏಜೆನ್ಸಿ ಸೂಚನೆಗಳಲ್ಲಿ ಸರಕುಗಳನ್ನು ಪ್ರತಿವಾದಿ ಸಂಖ್ಯೆ:1

ಅವರಿಗೆ ಪ್ರತಿವಾದಿ ಸಂಖ್ಯೆ:2 ಅವರ ಮುಖಾಂತರ ಎ.ಆರ್.ಸಂಖ್ಯೆ:9817997 ದಿನಾಂಕ: 7.2.1998 ಸರಕುಗಳನ್ನು ಒಪ್ಪಿಸಿರುವುದನ್ನು ರುಜುವಾತುಪಡಿಸಿರುವನೇ?

2. ವಾದಿಯು ಬ್ಯಾಂಕಿಗೆ ಕಳುಹಿಸಿದ ದಸ್ತಾವೇಜುಗಳ ತರುವಾಯ, ಖರೀದಿದಾರನು ಆಪಾದಿಸಿದಂತೆ ಹುಂಡಿಯನ್ನು ಬಿಡುಗಡೆ ಮಾಡದಿರುವುದನ್ನು ರುಜುವಾತುಪಡಿಸಿರುವನೇ?

3. ವಾದಿಯು ಸರಕುಗಳನ್ನು ಪ್ರತಿವಾದಿಯು ಹಿಂದುರುಗಿಸುವುದಕ್ಕೆ ಮಾಡಿದ ಮನವಿಗಳು ಮತ್ತು ಆ ಸಂಬಂಧ ದಿನಾಂಕ: 10.7.2000ರ ನೋಟೀಸನ್ನು ಗಣನೆಗೆ ತೆಗೆದುಕೊಂಡಿಲ್ಲವೆಂದು ರುಜುವಾತುಪಡಿಸಿರುವನೇ?

4. ಲಿಖಿತ ವಿವರಣೆ ಪತ್ರದಲ್ಲಿನ ಪ್ಯಾರಾ ಸಂಖ್ಯೆ:2ರಲ್ಲಿ ವಾದಾಂಶದಂತೆ ದಾವೆಯು ದೋಷದಿಂದ ಕೂಡಿದೆಯೇ?

5. ವಾಹಕಗಳ ಅಧಿನಿಯಮದ 10ನೇ ಪ್ರಕರಣದ ಅಡಿಯಲ್ಲಿ ನೋಟೀಸನ್ನು ನೀಡಬೇಕಾಗಿರುವಾಗ ದಾವೆಯು ಪ್ರತಿಕೂಲವಾಗಿದೆಯೇ?

6. ಕಾಲ ಪರಿಮಿತಿಯಿಂದ ಮೂಲಕ ದಾವೆಯು ಪ್ರತಿಷೇದಿತವಾಗಿದೆಯೇ?

7. ವಾದಿಯು ಕೋರಿರುವ ದಾವೆಯ ಕ್ಲೇಮನ್ನು ವಸೂಲಿ ಮಾಡುವುದಕ್ಕೆ ಹಕ್ಕುಳ್ಳವನಾಗಿರುವನೇ?

8. ಯಾವ ಡಿಕ್ರಿ ಅಥವಾ ಆದೇಶ?"

6. ಮೇಲಿನ ವಾದಗಳು ಮತ್ತು ವಾದಾಂಶಗಳೊಂದಿಗೆ ಪಕ್ಷಕಾರರು ವಿಚಾರಣೆಗೆ ಬಂದಿರುವರು. ವಾದಿಯನ್ನು ಪ್ರಾ.ಸಾ.1 ಆಗಿ ವಿಚಾರಣೆ ಮಾಡಲಾಗಿದೆ. ಅವರ ಪರವಾಗಿ ನಿಶಾನೆ ಪಿ.1 ರಿಂದ ಪಿ.5ರ ವರೆಗೆ ಗುರುತು ಮಾಡಲಾಗಿದೆ. ಪ್ರತಿವಾದಿಯ ಪರವಾಗಿ ಯಾರನ್ನು ವಿಚಾರಣೆ ಮಾಡಲಾಗಿಲ್ಲ ಮತ್ತು ಯಾವುದೇ ದಸ್ತಾವೇಜನ್ನು ಹಾಜರುಪಡಿಸಿರುವುದಿಲ್ಲ.

7. ಸಾಕ್ಷ್ಯಗಳ ಅಮೂಲಾಗ್ರ ವಿಶ್ಲೇಷಣೆಯ ಮೇಲೆ, ವಿಚಾರಣಾಧೀನ ನ್ಯಾಯಾಲಯ ಸಂಖ್ಯೆ: 1, 2, 3 5 ಮತ್ತು 6ನೇ ವಿವಾದಾಂಶದಲ್ಲಿ ನೀಡಿದ ನಿರ್ಣಯವು ಸಕಾರಾತ್ಮಕವಾಗಿದೆ. 4ನೇ ಮತ್ತು 7ನೇ ಸಂಖ್ಯೆಯ ವಿವಾದಾಂಶವು ನಕರಾತ್ಮಕವಾಗಿದೆ ಮತ್ತು ದಾವೆಯನ್ನು ವಜಾಗೊಳಿಸಲಾಗಿದೆ. ವಿಚಾರಣಾಧೀನ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತರಾದ ವಾದಿ ಮತ್ತು ಪ್ರತಿವಾದಿಗಳಿಬ್ಬರೂ ಈ ನ್ಯಾಯಾಲಯದ ಮುಂದೆ ಅರ್ಜಿಯನ್ನು ದಾಖಲಿಸಿರುವರು.

8. ವಾದಿಯ ಪರವಾಗಿ ಮಾನ್ಯ ವಕೀಲರಾದ ಶ್ರೀ ಸುರಾನಾ ಅವರು ಮುಖ್ಯವಾಗಿ ಒತ್ತಾಯಿಸಿರುವ ಎರಡು ವಾದಾಂಶಗಳು ಹೀಗಿದೆ:

- ಮೊದಲನೆಯದಾಗಿ, 1 ರಿಂದ 4ನೇ ಸಂಖ್ಯೆಯ ವಿವಾದಾಂಶಗಳ ನಿರ್ಣಯಗಳು ವಾದಿಯ ಪರವಾಗಿ ಇವೆ. ಮಾನ್ಯ ವಿಚಾರಣಾಧೀನ ನ್ಯಾಯಾಲಯ ವಾಹಕಗಳ ಅಧಿನಿಯಮ, 1865ರ 10ನೇ ಪ್ರಕರಣದ ಅಡಿಯಲ್ಲಿ ನೋಟೀಸು ನೀಡಬೇಕಾಗಿರುವುದಕ್ಕಾಗಿ ಅದು ಪ್ರತಿಕೂಲವಾಗಿರುವ ಅಧಾರದ ಮೇಲೆ ಪ್ರಮುಖ ದಾವೆಯನ್ನು ವಜಾಗೊಳಿಸಿದೆ. ವಿಚಾರಣಾಧೀನ ನ್ಯಾಯಾಲಯದ ಮುಂದೆ ಪ್ರತಿವಾದಿಯು ಯಾವುದೇ ಸಾಕ್ಷ್ಯವನ್ನಾಗಲೀ ಅಥವಾ ಯಾವುದೇ ದಸ್ತಾವೇಜನ್ನಾಗಲೀ ಹಾಜರುಪಡಿಸಿರುವುದಿಲ್ಲ. ಆದುದರಿಂದ, ಪಾಟೀ ಆಕ್ಷೇಪಣೆಗಳ ಗುಣಾರ್ಹತೆಯೂ ಶೂನ್ಯವಾಗಿದೆ ಮತ್ತು ವಜಾಗೊಳ್ಳಲು ಅರ್ಹವಾಗಿದೆ.

- ಎರಡನೆಯದಾಗಿ, 1 ರಿಂದ 4ನೇ ಸಂಖ್ಯೆಯ ವಿವಾದಾಂಶಗಳ ಮೇಲೆ ವಿಚಾರಣಾಧೀನ ನ್ಯಾಯಾಲಯವು ಅಭಿಲೇಖಿಸಿದ ನಿರ್ಣಯಗಳ ಅಭಿಪ್ರಾಯದಲ್ಲಿ,

ವಿಚಾರಣಾಧೀನ ನ್ಯಾಯಾಲಯವು 5ನೇ ಸಂಖ್ಯೆಯ ವಿವಾದಾಂಶದೊಂದಿಗೆ ವ್ಯವಹರಿಸುವ ಕಾನೂನಿನ ಪ್ರಶ್ನೆಯನ್ನು ಈ ನ್ಯಾಯಾಲಯವು ಅಗತ್ಯ ಪ್ರಶ್ನೆಯಾಗಿ ಪರಿಗಣಿಸಬೇಕಾಗುತ್ತದೆ. ನ್ಯಾಯವಾದಿಗಳು ಈ ಸಂಬಂಧದಲ್ಲಿ ಘನವೆತ್ತ ಸರ್ವೋಚ್ಚ ನ್ಯಾಯಾಲಯ ***ಭಾರತ ಸಾರಿಗೆ ನಿಗಮ ನಿಯಮಿತ –ವಿರುದ್ಧ– ವೆಲ್‌ಜಾನ್ ಹೈಡ್ರೇರ್ ನಿಯಮಿತ***[1] ವರದಿಯಾಗಿರುವ ಮೊಕದ್ದಮೆಯಲ್ಲಿ ನೀಡಿದ ತೀರ್ಪನ್ನು ಅವಲಂಬಿಸಿರುವರು. ಈ ಮೊಕದ್ದಮೆಯ ವಾದಾಂಶದಲ್ಲಿ, ಸರಕು ರವಾನೆದಾರನ ಮೂಲಕ ಸರಕುಗಳನ್ನು ಹಿಂಪಡೆಯಲು ಕೋರಲು ವಾಹಕಗಳ ಅಧಿನಿಯಮ, 1805ರ 10ನೇ ಪ್ರಕರಣವು ಅನ್ವಯವಾಗತಕ್ಕದ್ದಲ್ಲವೆಂದು ತೀರ್ಪು ನೀಡಿದೆ ಎಂದು ಪ್ರಸ್ತುತ ಮೊಕದ್ದಮೆಯ ಆಧಾರವಾಗಿ ತೀರ್ಪನ್ನು ಉಲ್ಲೇಖಿಸಿರುವರು.

9. ನಾನು, ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ನಿವೇದನೆಗಳನ್ನು ಬಹು ಎಚ್ಚರಿಕೆಯಿಂದ ಪರಿಗಣಿಸಿರುತ್ತೇನೆ ಮತ್ತು ಅಭಿಲೇಖಗಳನ್ನು ಅವಲೋಕಿಸಿರುತ್ತೇನೆ.

10. ಈ ಮೊಕದ್ದಮೆಯ ಸಂಗತಿಗಳ ಸಾರಾಂಶದಲ್ಲಿ, ಈ ನ್ಯಾಯಾಲಯ ಪರಿಗಣಿಸುವುದಕ್ಕಾಗಿ ಎತ್ತಲಾದ ಅಂಶವು ಹೀಗಿದೆ:

> "ವಾಹಕಗಳ ಅಧಿನಿಯಮ, 1865ರ 10ನೇ ಪ್ರಕರಣದ ಅಡಿಯಲ್ಲಿನ ನೋಟೀಸು ಅವಶ್ಯಕವಾಗಿದೆಯೇ?"

11. ಸಂಗತಿಗಳು ವಿವಾದಿತವಾಗಿರುವುದಿಲ್ಲ. ವಾದಿಯು ಸರಕುಗಳ ಸಾಗಣೆಗಾಗಿ ಮೆ॥ ಕೇರಳ ರೋಡ್‌ವೇಸ್ ಲಿಮಿಟೆಡ್‌ನ ಬೆಂಗಳೂರು ಶಾಖೆಗೆ ವಹಿಸಿರುತ್ತಾನೆ. ಸರಕು ಗ್ರಾಹಕನು ಬ್ಯಾಂಕಿನಿಂದ ದಸ್ತಾವೇಜನ್ನು ಪಡೆದುಕೊಂಡಿರುವುದಿಲ್ಲ ಮತ್ತು ಸರಕುಗಳನ್ನು ಪಡೆದುಕೊಂಡಿರುತ್ತಾನೆ. ವಾದಿಯು ಕೊಯಿಲಾಂಡಿನಿಂದ ಬೆಂಗಳೂರಿಗೆ ಸರಕುಗಳನ್ನು ಹಿಂದುರಿಗಿಸುವುದಕ್ಕೆ ಕೋರಿರುತ್ತಾನೆ.

---

1. (2007) 3 ಎಸ್‌ಸಿಸಿ 142

12. ವಾದಿಯು ನಿಶಾನೆ ಪಿ.3ರಲ್ಲಿರುವ ಪತ್ರ ದಿನಾಂಕ: 23.10.1998ರಂದು ಸಾರಿಗೆ ಕಂಪನಿಯ ಮಹಾವ್ಯವಸ್ಥಾಪಕನಿಗೆ ಸರಕುಗಳನ್ನು ಹಿಂದುರುಗಿಸುವುದಕ್ಕೆ ಬರೆದ ಪತ್ರವಾಗಿದೆ. ನಿಶಾನೆ ಪಿ.4ರಲ್ಲಿ ದಿನಾಂಕ:10.7.2000ರಂದಿನ ಕಾನೂನು ನೋಟೀಸ್ ಆಗಿದೆ. ಮೊದಲ ಪ್ರತಿವಾದಿಯು 24,740/– ರೂಪಾಯಿಗಳನ್ನು ಸಂದಾಯ ಮಾಡುವುದಕ್ಕೆ ಕಳುಹಿಸಿದ ಕಾನೂನು ನೋಟೀಸು ಆಗಿದೆ. ಇದರಲ್ಲಿ ಸರಕುಗಳ ಮೌಲ್ಯದೊಂದಿಗೆ ಶೇ.24ರಷ್ಟು ಬಡ್ಡಿ ಹಾಗೂ ಕಾನೂನು ವೇಚ್ಚವಾಗಿ 200/– ರೂ.ಗಳನ್ನು ಒಳಗೊಂಡಿದೆ. ನಿಶಾನೆ ಪಿ.5ರಲ್ಲಿ ಮೆ॥ ಕೇರಳ ರೋಡ್‌ವೇಸ್ ಲಿಮಿಟೆಡ್‌ನ ಬೆಂಗಳೂರು ಕಚೇರಿಗೆ ಅದರ ಕೊಯಿಲಾಂಡಿ ಕಚೇರಿಗೆ ಅಂದರೆ ರವಾನಿ ಸರಕನ್ನು ಹಿಂದುರುಗಿಸುವುದಕ್ಕೆ ಕೋರಿ ಬರೆದ ಸಂವಹನ ಪತ್ರಗಳಿವೆ. ನಿಶಾನೆ ಪಿ.5ರಲ್ಲಿ ಸದರಿ ಸಂವಹನ ಪತ್ರದೊಂದಿಗೆ ಅವಶ್ಯ ಬೆಲೆಪಟ್ಟಿ ಮತ್ತು ಘೋಷಣೆಗಳು ಸಹ ಲಗತ್ತಿಸಲಾಗಿದೆ.

13. ಘನವೆತ್ತ ಸರ್ವೋಚ್ಚ ನ್ಯಾಯಾಲಯವು ***ಭಾರತ ಸಾರಿಗೆ ನಿಗಮ*** (ಮೇಲಿನ) ಮೊಕದ್ದಮೆಯಲ್ಲಿ ನೀಡಿದ ತೀರ್ಪಿನ 7ನೇ ಪ್ಯಾರಾದಲ್ಲಿನ ತೀರ್ಪು ಈ ಮುಂದಿನಂತಿದೆ:

> "7. ಅಧಿನಿಯಮದ 10ನೇ ಪ್ರಕರಣದಲ್ಲಿ ಅಗತ್ಯಪಡಿಸುವ ನೋಟೀಸು, ಉದ್ಧೃತ ಭಾಗ ಕೆಳಗಿದೆ:
>
> *"10. ಹಾನಿ ಅಥವಾ ನಷ್ಟದ ನೋಟೀಸನ್ನು ಆರು ತಿಂಗಳ ಒಳಗಾಗಿ ನೀಡತಕ್ಕದ್ದು. ದಾವೆಯನ್ನು ಹೂಡುವುದಕ್ಕೆ ಮುಂಚೆ ಆತನಿಗೆ ನಷ್ಟ ಅಥವಾ ಹಾನಿಯ ನೋಟಿಸನ್ನು ಲಿಖಿತದಲ್ಲಿ ನೀಡಿದ ಮತ್ತು ನಷ್ಟದ ಅಥವಾ ಹಾನಿಯ ವಿಷಯ ವಾದಿಯ ಗಮನಕ್ಕೆ ಬಂದ ಸಮಯದಿಂದ ಆರು ತಿಂಗಳ ಒಳಗಾಗಿ ಲಿಖಿತದಲ್ಲಿ ನೋಟೀಸನ್ನು ನೀಡಿದ ಹೊರತು, ಸರಕು ರವಾನೆಗಾಗಿ ಆತನಿಗೆ ವಹಿಸಿದೆ. ಒಟ್ಟಾರೆ ಸರಕುಗಳ ಬಳಕೆಯಲ್ಲಿ ಸಾಗಣೆಯ ಅಂಥವೇ ವಸ್ತುಗಳು, ಗುಬುಟುಗಳು ಹಾಗೂ ಸಂಗ್ರಾಹಗಳನ್ನು ಒಳಗೊಂಡ*

*ಸರಕುಗಳಿಗೆ ಆದ ನಷ್ಟ ಅಥವಾ ಹಾನಿಗಾಗಿ ಸಾಮಾನ್ಯ ವಾಹಕದ ವಿರುದ್ಧ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ."*

ಸಾಗಣೆಗಳಿಗಾಗಿ ವಹಿಸಿಕೊಟ್ಟ ಸರಕುಗಳಿಗೆ ಹಾನಿ ಅಥವಾ ನಷ್ಟ ಉಂಟಾದರೆ ಸಾಮಾನ್ಯವಾಗಿ ವಾಹಕದ ವಿರುದ್ಧವಾಗಿ ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕಾಗಿ 10ನೇ ಪ್ರಕರಣದಲ್ಲಿ ನಿರೂಪಿಸಿದಂತೆ ನೋಟೀಸಿನ ವಿಧಾನವನ್ನು ಅಗತ್ಯಪಡಿಸಿದೆ. ವಾಹಕಗಳ ಅಧಿನಿಯಮ, 1865ರ 10ನೇ ಪ್ರಕರಣದ ಅಡಿಯಲ್ಲಿ ಜಾರಿ ಮಾಡಿದ ನೋಟೀಸು ನಿರ್ದಿಷ್ಟವಾಗಿ ಏನನ್ನೂ ಹೇಳುವ ಅಗತ್ಯ ಇರುವುದಿಲ್ಲ. 10ನೇ ಪ್ರಕರಣದ ಅಗತ್ಯತೆಗಳನ್ನು ನೆರವೇರಿಸುವ ನೋಟೀಸುಗಳಾಗಿದ್ದರೆ ಅದು ಯುಕ್ತವಾದ ನೋಟೀಸು ಆಗಿರುತ್ತದೆ. ನೋಟೀಸಿನಲ್ಲಿ ಸರಕುಗಳಿಗೆ ಆಗಿರುವ ನಷ್ಟ ಅಥವಾ ಹಾನಿ ಕುರಿತು ವಾಹಕಗಳಿಗೆ ತಿಳಿಸುತ್ತದೆ. ಅಂಥ ನೋಟೀಸು, 10ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟವಾಗಿ ಸಾಮಾನ್ಯವಾಹಕ ಹಾನಿಯ ಸ್ಥಿತಿಯಲ್ಲಿ ಸರಕುಗಳನ್ನು ವಿಲೇ ಮಾಡಿರುವ ದಿನ ಅಗತ್ಯಪಡಿಸಿರುತ್ತದೆ ಅಥವಾ ಸಾಮಾನ್ಯ ವಾಹಕ ಹಾನಿಯ ಸ್ಥಿತಿಯಲ್ಲಿ ಸರಕುಗಳನ್ನು ವಿಲೇ ಮಾಡಿದ್ದಲ್ಲಿ ಅಥವಾ ವಾಹಕಕ್ಕಾಗಿ ವಹಿಸಿಕೊಂಡ ಸರಕುಗಳ ಸಾಮಾನ್ಯ ವಾಹಕ ನಷ್ಟ ಪಡಿಸಿದ್ದರೆ ಮತ್ತು ಅಂಥ ಹಾನಿ ನಷ್ಟಗಳ ಸಂಬಂಧದಲ್ಲಿ ಸರಕು ರವಾನೆದಾರ/ಸರಕುಗ್ರಾಹಕ/ ಮಾಲೀಕ ಇವರಿಗೆ ತಿಳಿಸುವುದು. ರವಾನೆ ಸರಕುಗಳಿಗೆ ಸಾಂದರ್ಭಿಕವಾಗಿ ಆಗುವ ನಷ್ಟಕ್ಕೆ ಅಥವಾ ಹಾನಿಗೆ ಸಂಬಂಧಿಸಿದಂತೆ ಆ ಬಗ್ಗೆ ವಾಹಕಗಳ ಮೇಲೆ ನೋಟೀಸು ನೀಡುವುದು ಈ ಪ್ರಕರಣದ ಮುಖ್ಯ ಉದ್ದೇಶವಾಗಿದೆ. ಆದರೆ ಇಲ್ಲಿ ಸರಕುಗಳಿಗೆ ಯಾವುವೇ ಹಾನಿ ಅಥವಾ ನಷ್ಟ ಉಂಟಾಗದಿರುವುದಿಲ್ಲ. ಹಾಗೂ ಇಲ್ಲಿ ಸಾಮಾನ್ಯ ವಾಹಕ ಸರಕುಗಳನ್ನು ವಿಲೇ ಮಾಡಲು ತಪ್ಪಾಗಿ ಅಥವಾ

ಕಾನೂನುಬಾಹಿರವಾಗಿ ನಿರಾಕರಿಸಿದೆ ಮತ್ತು ವಿಲೇಗೆ ಹಕ್ಕುಳ್ಳ ವ್ಯಕ್ತಿ ವಿಲೇ ಮಾಡದಿರಲು ಉಪಕ್ರಮಿಸಿರುವುದು ಇಲ್ಲಿ ಸ್ಪಷ್ಟವಾಗಿದೆ. ಆದುದರಿಂದ ಇಲ್ಲಿ 10ನೇ ಪ್ರಕರಣವು ಅನ್ವಯವಾಗುವುದಿಲ್ಲ. ಅದರಂತೆಯೇ ವಿಲೆಗೆ ಹಕ್ಕುಳ್ಳ ವ್ಯಕ್ತಿಗೆ (ರವಾನೆ ಸರಕುದಾರ/ ರವಾನೆ ಗ್ರಾಹಕ/ಮಾಲೀಕ) ಸಾಮಾನ್ಯ ವಾಹಕ ಸರಕುಗಳನ್ನು ಪತ್ತೆ ಮಾಡುವ ಪ್ರಕ್ರಿಯೆ ಮುಗಿಯುವವರೆಗೂ ರವಾನೆ ಸರಕು ಪತ್ತೆ ಮಾಡಬೇಕಾದ ಮತ್ತು ವಿಲೇ ಮಾಡಬೇಕಾಗುವುದಕ್ಕಾಗಿ ಅವನಿಗೆ ಕಾಯುವಂತೆ ವಿನಂತಿಸುವುದು. ಆದರೆ ಇಲ್ಲಿ ಕ್ಲೇಮುದಾರರಾದ ಸರಕು ರವಾನೆದಾರ/ಸರಕು ಗ್ರಾಹನಿಗೆ ರವಾನೆ ಸರಕು ನಷ್ಟದ ಬಗ್ಗೆಯಾಗಲೀ ಅವರ್ಯಾರಿಗೂ ಇಲ್ಲಿ ಮಾಹಿತಿಯನ್ನು ನೀಡಿರುವುದಿಲ್ಲ ಅಥವಾ ರವಾನೆ ಸರಕು ಪತ್ತೆ ಮಾಡುವುದಕ್ಕೆ ಮತ್ತು ವಿಲೇ ಮಾಡುವುದಕ್ಕೆ ಅಸಮರ್ಥ್ಯವಾಗಿರುವ ಬಗ್ಗೆಯಾಗಲೀ ಮಾಹಿತಿ ನೀಡಿರುವುದಿಲ್ಲ. ಕ್ಲೇಮುದಾರರಿಗೆ ಸರಕುಗಳಿಗಾದ ಹಾನಿ ಅಥವಾ ನಷ್ಟ ಹಾಗೂ ವಿಲೇ ಮಾಡದಿರುವ ಸರಕುಗಳ ಮಾಹಿತಿಯನ್ನು ನೀಡಿರುವುದಿಲ್ಲ. ಹಾನಿ ಅಥವಾ ನಷ್ಟದ ಸರಕುಗಳ ಸಂಬಂಧ 10ನೇ ಪ್ರಕರಣದಲ್ಲಿ ಆರು ತಿಂಗಳೊಳಗೆ ನೋಟೀಸ್ ಅನ್ನು ಅಗತ್ಯಪಡಿಸಿದೆ. ಆದರೆ ಈ ಅಂಥ ವಿಲೇ ಮಾಡದಿರುವ ಆಧಾರವಾಗಿ ಕ್ಲೇಮು ಮಾಡುವುದಕ್ಕೆ 10ನೇ ಪ್ರಕರಣವು ಅನ್ವಯವಾಗುವುದಿಲ್ಲ. 10ನೇ ಪ್ರಕರಣದ ಸಂಗತಿಯಲ್ಲಿ ಸರಕುಗಳು 'ವಿಲೇ ಮಾಡದಿರುವ' ಪದವು ಬಳಕೆಯಾಗಿರುವುದಿಲ್ಲ. ಆದರೆ ಸರಕುಗಳ 'ನಷ್ಟದ' ಅಥವಾ ಹಾನಿಯ ಎಂಬ ಪದವು ಬಳಕೆಯಾಗಿರುತ್ತದೆ. ರವಾನೆ ಸರಕು ನಷ್ಟವಾದ ಬಗ್ಗೆ ಸರಕು ರವಾನೆದಾರ/ಸರಕು ಗ್ರಾಹಕನಿಗೆ ಸಾಮಾನ್ಯ ವಾಹಕ ಮಾಹಿತಿ ಕೊಟ್ಟಾಗ ಮಾತ್ರವೇ 'ವಿಲೇ ಮಾಡದಿರುವ' ಸಂದರ್ಭವು ರವಾನೆ ಸರಕು ನಷ್ಟದ ಸಂದರ್ಭವಾಗುತ್ತದೆ.

14. ಶ್ರೀ ಬಾಲಕೃಷ್ಣ ಶಾಸ್ತ್ರಿಯವರು, ***ಅಮೆರಿಕನ್ ಎಕ್ಸ್‌ಪೋರ್ಟ್ ಇಬ್ರಾಂಡ್‌ಸೆನ್ ಲೈನ್ಸ್ ಇಂಕ್ ಮತ್ತು ಮತ್ತೊಬ್ಬರು –ವಿರುದ್ಧ– ಜೋ ಲೊಪೆಜ್ ಮತ್ತು ಮತ್ತೊಬ್ಬರು***[2] ವರದಿಯಾಗಿರುವ ಮೊಕದ್ದಮೆಯಲ್ಲಿ ಸರಕುಗಳನ್ನು ವಿಲೇ ಮಾಡದಿರುವ ವಾದಾಂಶಾದಲ್ಲಿ ಅದನ್ನು ಸಂಬಂಧಪಟ್ಟ ಸರಕು ರವಾನೆದಾರ ಸಾಧ್ಯವಾದಷ್ಟುಮಟ್ಟಿಗೆ 'ಹಾನಿ ಅಥವಾ ನಷ್ಟ' ಎಂದು ಪರಿಭಾಷಿಸಿರುತ್ತಾನೆ. ವಿಲೆಯಾಗದಿರುವುದು ಎಂದರೆ ನಷ್ಟವಾಗಿದೆ ಎಂದು ಅರ್ಥ ಎಂಬ ವಾದಾಂಶವನ್ನು ಆಧಾರವಾಗಿ ಮೇಲೆ ಪ್ರಸ್ತಾವಿತ ಕಾನೂನಿಗೆ ಆಧಾರವಾಗಿ ಮಂಡಿಸಿರುವರು. ಶ್ರೀ ಸುರಾನ ಅವರು ಶ್ರೀ ಬಾಲಕೃಷ್ಣ ಶಾಸ್ತ್ರಿ ಅವರು ನಿರ್ದಿಷ್ಟವಾಗಿ ನೀಡಿದ ಮೊಕದ್ದಮೆಗೆ ವಿರುದ್ಧವಾಗಿ ಮಂಡಿಸಿದ ಭಾರತೀಯ ಸಮುದ್ರ ಮೂಲಕ ಸರಕುಗಳ ವಾಹಕ ಅಧಿನಿಯಮ, 1925ರ ಅಡಿಯಲ್ಲಿ ***ಭಾರತ ಸಾರಿಗೆ ನಿಗಮ ನಿಯಮಿತ*** (ಮೇಲಿನ) ಮೊಕದ್ದಮೆಯ ತೀರ್ಪಿನಲ್ಲಿ, ವಾಹಕಗಳ ಅಧಿನಿಯಮ, 1865ರ 10ನೇ ಪ್ರಕರಣದೊಂದಿಗೆ ವ್ಯವಹರಿಸುವ ಅಂಶವು ನೇರವಾದುದಾಗಿದೆ ಎಂದು ಒತ್ತಾಯಿಸಿ ವಾದವನ್ನು ನಿವೇದಿಸಿರುವರು.

15. ***ಭಾರತ ಸಾರಿಗೆ ನಿಗಮ ನಿಯಮಿತದ*** (ಮೇಲಿನ) ಮೊಕದ್ದಮೆಯಲ್ಲಿ, ಘನವೆತ್ತ ಸರ್ವೋಚ್ಚ ನ್ಯಾಯಾಲಯ ವಾಹಕಗಳ ಅಧಿನಿಯಮ, 1865ರ 10ನೇ ಪ್ರಕರಣದ ಅಡಿಯಲ್ಲಿ ನೋಟೀಸ್ ಕೊಡುವ ಅಗತ್ಯವಿರುವುದಿಲ್ಲ ಎಂದು ತೀರ್ಪಿನಲ್ಲಿ ಹೇಳಿದೆ. ಆದುದರಿಂದ, ಸದರಿ ತೀರ್ಪು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಸಂಪೂರ್ಣವಾಗಿ ಅನ್ವಯವಾಗುತ್ತದೆ.

16. ವಿವಾದವಾಗದಿರುವ ಸಂಗತಿಯ ಹಿನ್ನೆಲೆಯಲ್ಲಿ, ವಾದಿಯು ಸರಕುಗಳನ್ನು ಹಿಂದಿರುಗಿಸುವುದಕ್ಕೆ ಕೋರಿರುತ್ತಾನೆ ಮತ್ತು ಪ್ರತಿವಾದಿಗಳು ಸದರಿ ಕೋರಿಕೆಯನ್ನು ನೆರವೇರಿಸುವಲ್ಲಿ ವಿಫಲವಾಗಿರುವರು. ನನ್ನ ಪರಿಗಣನೆಯ ಅಭಿವ್ಯಕ್ತಿಯಲ್ಲಿ,

---

2. ಎಐಆರ್ 1972 ಎಸ್‌ಸಿ 1405

ವಿಚಾರಣಾಧೀನ ನ್ಯಾಯಾಲಯ ವಾಹಕಗಳ ಅಧಿನಿಯಮ, 1865ರ 10ನೇ ಪ್ರಕರಣದ ಅಡಿಯಲ್ಲಿ ನೋಟಿಸ್ ಅನ್ನು ನೀಡುವುದಕ್ಕಾಗಿ ದಾವೆಯನ್ನು ವಜಾ ಮಾಡಿರುವುದು ದೋಷಪೂರ್ಣವಾಗಿದೆ.

17. ತತ್ ಪರಿಣಾಮವಾಗಿ, ಆರ್‌ಎಫ್‌ಎ ಸಂಖ್ಯೆ: 1432/2003ರ ಅಪೀಲಿನಲ್ಲಿ ಗುಣಾರ್ಹತೆಯನ್ನು ಪರಿಗಣಿಸಲಾಗಿದೆ ಮತ್ತು ಆರ್‌ಎಫ್‌ಎ ಸಿಆರ್‌ಒಬಿ ಸಂಖ್ಯೆ:18/ 2004 ರಲ್ಲಿ ಗುಣಾರ್ಹತೆಗಳು ಶೂನ್ಯವಾಗಿರುವುದರಿಂದ ವಜಾಗೊಳ್ಳಲು ಅರ್ಹವಾಗಿದೆ. ಅದು ಈ ಮುಂದಿನಂತಿದೆ.

## ಆದೇಶಗಳು

(i) ಆರ್‌ಎಫ್‌ಎ ಸಂಖ್ಯೆ: 1432/2003ಅನ್ನು ಭಾಗಶಃ ಪುರಸ್ಕರಿಸಲಾಗಿದೆ ಮತ್ತು XXVI ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶ, ಮೇಯೋಹಾಲ್, ಬೆಂಗಳೂರಿನಲ್ಲಿ ದಾಖಲಿಸಿದ ಅ.ದಾ.ಸಂ: 16514/2000ರಲ್ಲಿ ದಿನಾಂಕ 27.3.2003ರಂದು ನೀಡಿದ ತೀರ್ಪು ಮತ್ತು ಡಿಕ್ರಿಯನ್ನು ವಜಾಗೊಳಿಸಲಾಗಿದೆ;

(ii) ಮೂ.ದಾ.ಸಂಖ್ಯೆ: 16514/2000ರಲ್ಲಿ ದಾವೆಯು ಡಿಕ್ರಿಯಾಗಿದೆ. ಪ್ರತ್ಯರ್ಜಿದಾರರಿಗೆ ದಾವೆಯ ದಿನಾಂಕದಿಂದ, ವಾದಿಗೆ ಮೊತ್ತವನ್ನು ಸಂದಾಯ ಮಾಡುವವರೆಗೂ ವಾರ್ಷಿಕ ಶೇ.12ರಷ್ಟು ಸರಳ ಬಡ್ಡಿ ದರದಲ್ಲಿ 24,740/– ರೂ.ಗಳನ್ನು ಸಂದಾಯ ಮಾಡುವುದಕ್ಕೆ ಪ್ರತ್ಯರ್ಜಿದಾರರಿಗೆ ನಿರ್ದೇಶಿಸಲಾಗಿದೆ.

(iii) ಆರ್‌ಎಫ್‌ಎ ಸಿಆರ್‌ಒಬಿ ಸಂಖ್ಯೆ: 18/2004 ಅನ್ನು ವಜಾಗೊಳಿಸಲಾಗಿದೆ.

ಯಾವುದೇ ವೆಚ್ಚಗಳು ಇಲ್ಲ.